04) ವಾರ್ಷಿಕ ಕಾಮಗಾರಿಗಳ ಪಟ್ಟಿಯಲ್ಲಿ ಸೇರಿಸಲಾಗಿದ್ದು 350 00 ಲಕ್ಷ ರೂ.ಗಳನ್ನು ಕಾದಿರಿಸಲಾಗಿದೆ ಈ ವಿದ್ಯುತ್ ಉಪ ಕೇಂದ್ರದ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿವರವಾದ ಯೋಜನಾ ವರದಿಗೆ ನಿಗಮವು ಅನುಮೋದನೆ ನೀಡಿರುತ್ತದೆ ಈ ಉಪ ಕೇಂದ್ರದ ಕಾಮಗಾರಿಯ ನಿರ್ವಹಣೆಗಾಗಿ "ಟರ್ನ್ ಕೀ" ಗುತ್ತಿಗೆ ಆಧಾರದಲ್ಲಿ ಟೆಂಡರ್ ಕರೆಯಬೇಕಾಗಿದ್ದು, ಟೆಂಡರಿಂಗ್ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ ಟೆಂಡರಿಂಗ್ ಪ್ರಕ್ರಿಯೆಯು ಪೂರ್ಣಗೊಂಡು ಗುತ್ತಿಗೆದಾರರಿಗೆ ಕಾರ್ಯನಿರ್ವಹಿಸಿಕೊಟ್ಟ ನಂತರ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ

ರಾಜ್ಯ ಸರ್ಕಾರವು ವಿವಿಧ ಲಾಟರಿ ಯೋಜನೆಗಳನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ

96 (182) ಶ್ರೀ ಯೋಗೀಶ್ ಭಟ್ ಎನ್ (ಮಂಗಳೂರು) ಮಾನ್ಯ ಸಣ್ಣ ಉಳಿತಾಯ, ರಾಜ್ಯ ಲಾಟರಿ, ವಿಮೆ ಹಾಗೂ ಆಗ್ರೋ ಪ್ರೋಸೆಸಿಂಗ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ವಿವಿಧ ಲಾಟರಿ ಯೋಜನೆಗಳಿಗೆ ಕಡಿವಾಣ ಹಾಕಲು ಕ್ರಮ ಕೈಗೊಂಡಿದೆಯೆ

ಆ) ಕ್ರಮದ ಸ್ವರೂಪಗಳೇನು ಪ್ರತಿ ಲಾಟರಿ ಮೇಲೂ ತೆರಿಗೆ ಸಂಗ್ರಹಿಸಲಾಗುವುದೇ ಎಷ್ಟು ಮೊತ್ತ (ಇತ್ಯಾದಿ ವಿವರ ನೀಡುವುದು)

ಇ) ರಾಜ್ಯದಲ್ಲಿ ಹಾಲಿ ಚಾಲ್ತಿಯಲ್ಲಿರುವ ವಿವಿಧ ಲಾಟರಿಗಳ್ಯಾವುವು ಅವುಗಳ ಬಹುಮಾನ ಮೊತ್ತವೆಷ್ಟು

ಈ) ಆನ್‌ಲೈನ್ ಲಾಟರಿ ನಿಯಂತ್ರಣಕ್ಕೆ ಸರ್ಕಾರ ಮುಂದಾಗುವುದಿಲ್ಲವೆ ಈ ಲಾಟರಿಯಿಂದ ಸರ್ಕಾರಕ್ಕೆ ಬರುತ್ತಿರುವ ಮಾಹೆಯಾನ ಉತ್ಪತ್ತಿ ಎಷ್ಟು

ಉ) ರಾಜ್ಯದಲ್ಲಿ ಸಣ್ಣ ಉಳಿತಾಯದಲ್ಲಿ ಕಳೆದ 3 ವರ್ಷಗಳಲ್ಲಿ ಸಂಗ್ರಹವಾದ ಹಣವೆಷ್ಟು (ಪ್ರತ್ಯೇಕವಾಗಿ ವಿವರ ನೀಡುವುದು)

ಊ) ಎಷ್ಟು ಏಜಂಟರುಗಳು ಸೇವೆ ಸಲ್ಲಿಸುತ್ತಿದ್ದಾರೆ ಅವರಿಗೆ ಕೊಡಬೇಕಾದ ಕಮೀಷನ್ ಹಣವೆಷ್ಟು ಬಾಕಿ ಎಷ್ಟು ಯಾವಾಗ ಕೊಡಲಾಗುವುದು

ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನಸೂರ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ, ವಿಮೆ ಹಾಗೂ ಆಗ್ರೋ ಪ್ರೋಸೆಸಿಂಗ್ ರಾಜ್ಯ ಸಚಿವರು)

ಅ) ಹೌದು

ಆ) ದಿನಾಂಕ 10 12 2003 ರಿಂದ ಜಾರಿಗೆ ಬಂದಿರುವ ಲಾಟರಿ ತೆರಿಗೆ ಸುಗ್ರಿವಾಜ್ಞೆಯಂತೆ ಪ್ರತಿದಿನ ನಡೆಯುವ ಪ್ರತಿ ಲಾಟರಿಗೆ ರೂ 1 ಲಕ್ಷ ಮತ್ತು ಪ್ರತಿ ಬಂಪರ್ ಡ್ರಾಗೆ ರೂ 15 ಲಕ್ಷಗಳಂತೆ ಲಾಟರಿ ಜೂಜು ತೆರಿಗೆ ನಿಗಧಿ ಪಡಿಸಿದೆ ಇದರಿಂದ ರಾಜ್ಯ ಸರ್ಕಾರಕ್ಕೆ ದಿನಕ್ಕೆ 35 ಲಕ್ಷ ದಿಂದ 40 ಲಕ್ಷ ರೂಪಾಯಿಗಳ ಜೂಜು ತೆರಿಗೆ ಬರುತ್ತಿದೆ

ಇ) ರಾಜ್ಯದಲ್ಲಿ ಹಾಲಿ ಚಾಲ್ತಿಯಲ್ಲಿರುವುದು 2 ರೀತಿಯ ಲಾಟರಿಗಳು

1) ಸಾಂಪ್ರದಾಯಿಕ ಲಾಟರಿ

2) ಗಣಕೀಕೃತ ನೆಟ್‌ವರ್ಕ್ ಲಾಟರಿ

ಸಾಂಪ್ರದಾಯಿಕ ಲಾಟರಿ ಬಹುಮಾನದ ಮೊತ್ತ ರೂ 1 ಲಕ್ಷದಿಂದ ರೂ 80 ರವರೆಗೆ ಹಾಗೂ ಗಣಕೀಕೃತ ನೆಟ್‌ವರ್ಕ್ ಲಾಟರಿಯಲ್ಲಿ ಲಕ್ಕಿ–3 ಕಿನೋ ಸಿಲ್ವರ್, ಹಾಗೂ ಕಿನೋ ಆನ್‌ಲೈನ್ ಲಾಟರಿಗಳಡಿ ಒಟ್ಟು 21 ಯೋಜನೆಗಳಿದ್ದು ಅವುಗಳ ಬಹುಮಾನ ಮೊತ್ತ ರೂ 10,00,000 ಗಳಿಂದ ರೂ 10 ರವರೆಗೆ ಇರುತ್ತದೆ

ಈ) ಕರ್ನಾಟಕ ರಾಜ್ಯ ಸರ್ಕಾರವು ಗಣಕೀಕೃತ ನೆಟ್‌ವರ್ಕ್ ಲಾಟರಿಯನ್ನು ನಡೆಸಲು ಮಾರುಕಟ್ಟೆ ವಿಜಂಟರೊಂದಿಗೆ 5 ವರ್ಷಗಳ ಒಪ್ಪಂದ ಮಾಡಿಕೊಂಡು ಪರವಾನಗಿ ನೀಡಿದೆ ಈ ಲಾಟರಿಯನ್ನು ನಿಷೇಧಿಸುವಂತೆ ಒತ್ತಾಯಿಸಿ ನಡೆಸುತ್ತಿರುವ ಪ್ರತಿಭಟನೆ ಹಾಗೂ ಚಳುವಳಿಗಳು ಸರ್ಕಾರದ ಗಮನಕ್ಕೆ ಬಂದಿದ್ದು ಈ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸುತ್ತಿದೆ ಈ ಆನ್‌ಲೈನ್ ಲಾಟರಿಯಿಂದ ವರ್ಷಕ್ಕೆ ಮಾರಾಟ ಮೊತ್ತದ ಶೇಕಡ 22 ರಷ್ಟು ಅಥವಾ ರೂ 140 ಕೋಟಿ ಇವುಗಳಲ್ಲಿ ಯಾವುದು ಹೆಚ್ಚೋ ಅದು ಸರ್ಕಾರಕ್ಕೆ ಬರುತ್ತದೆ 5 ವರ್ಷಗಳಲ್ಲಿ ಬರುವ ಒಟ್ಟು ಆದಾಯ ರೂ 1096 ಕೋಟಿ ಆಗಿದೆ

ಉ) ಅನುಬಂಧ – 1ರಲ್ಲಿ ಲಗತ್ತಿಸಿದೆ

ಊ) ಅನುಬಂಧ – 2 ರಲ್ಲಿ ಲಗತ್ತಿಸಿದೆ

ಕರ್ನಾಟಕ ರಾಜ್ಯದ ಜಿಲ್ಲಾವಾರು ನಿವ್ವಳ ಉಳಿತಾಯ ಪ್ರಗತಿ ವಿವರ (ರೂ ಕೋಟಿಗಳಲ್ಲಿ)

ಅನುಬಂಧ–1

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	2000–2001		2001–2002		2002–2003	
		ಒಟ್ಟು	ನಿವ್ವಳ	ಒಟ್ಟು	ನಿವ್ವಳ	ಒಟ್ಟು	ನಿವ್ವಳ
1	2	3	4	5	6	7	8
1)	ಬೆಂಗಳೂರು (ನಗರ)	1284 31	660 78	1261 81	703 03	1695 32	958 81
2)	ಬೆಂಗಳೂರು (ಗ್ರಾ)	74 96	34 06	70 91	33 53	97 12	38 24
3)	ತುಮಕೂರು	76 16	30 80	70 89	28 64	96 12	48 00
4)	ಕೋಲಾರ	123 57	62 31	110 26	45 54	152 99	65 00
5)	ಶಿವಮೊಗ್ಗ	133 78	65 86	150 83	70 77	181 55	79 89
6)	ಚಿತ್ರದುರ್ಗ	49 05	18 08	46 25	17 90	60 07	26 97
7)	ದಾವಣಗೆರೆ	64 31	30 01	75 89	32 72	95 79	46 97
8)	ಚಿಕ್ಕಮಗಳೂರು	58.54	24 16	55 73	17 47	75 18	27 06
9)	ಮೈಸೂರು	203 93	86 93	198 78	84 82	267 98	135 83
10)	ಚಾಮರಾಜನಗರ	25 85	12 84	26 07	12 78	35 83	17 04
11)	ಮಂಡ್ಯ	59 34	24 42	52 55	17 48	65 91	19 84
12)	ಹಾಸನ	81 31	38 21	82 31	34 37	110 19	48 02

1	2	3	4	5	6	7	8
13)	ದಕ್ಷಿಣ ಕನ್ನಡ	263 75	133 92	262 72	119 61	363 02	170 44
14)	ಉಡುಪಿ	164 97	81 20	166 30	76 81	240 48	104 40
15)	ಉತ್ತರ ಕನ್ನಡ	121 10	59 79	107 32	44 05	159 97	77 70
16)	ಕೊಡಗು	33 25	18 47	30 85	16 38	36 06	15 87
17)	ಬೆಳಗಾವಿ	241 16	106 38	218 75	100 12	256 94	110 24
18)	ಬಿಜಾಪುರ	65 23	25 68	56 22	18 97	73 31	31 60
19)	ಬಾಗಲಕೋಟೆ	63 69	27 16	58 73	24 30	70 01	30 59
20)	ಧಾರವಾಡ	161 90	76 29	151 46	68 19	216 04	116 21
21)	ಹಾವೇರಿ	37 80	16 56	35 71	12.50	48 31	20 78
22)	ಗದಗ್	45 49	22 42	41 56	15 44	58 88	26 93
23)	ಗುಲ್ಬರ್ಗ	101 25	43 24	73 50	26 72	97 25	42 14
24)	ಬೀದರ್	43 47	23 11	26 29	7 06	31 75	10 01
25)	ರಾಯಚೂರು	60 78	30 01	44 77	18 06	57 85	25 26
26)	ಕೊಪ್ಪಳ	25 43	12 04	23 55	8 64	33 07	14 03
27)	ಬಳ್ಳಾರಿ	83 02	36 85	78 55	36 78	100 22	49 44
	ಒಟ್ಟು	3748 01	1820 58	3578 89	162 66	4777 81	2356 41
	ನಿಗದಿಪಡಿಸಿದ ಗುರಿ	5460 00	1820 00	4950 00	1650 00	5670 00	1890 00

ಕರ್ನಾಟಕ ರಾಜ್ಯದ ಜಿಲ್ಲಾವಾರು ಸಣ್ಣ ಉಳಿತಾಯ ಏಜೆಂಟರ ವಿವರ

ಅನುಬಂಧ – 2

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	ಅಧಿಕೃತ ಏಜೆಂಟರು	ಎಂ ಪಿ ಕೆ ಬಿ ವೈ	ಪಿ ಪಿ ಎಫ್	ಒಟ್ಟು
1	2	3	4	5	6
1)	ಬೆಂಗಳೂರು (ನಗರ)	3523	1564	1270	6357
2)	ಬೆಂಗಳೂರು (ಗ್ರಾ)	629	802	08	1439
3)	ತುಮಕೂರು	195	849	15	1059
4)	ಕೋಲಾರ	672	802	10	1484
5)	ಶಿವಮೊಗ್ಗ	785	1479	90	2354
6)	ಚಿತ್ರದುರ್ಗ	558	425	15	998
7)	ದಾವಣಗೆರೆ	375	1006	22	1405
8)	ಚಿಕ್ಕಮಗಳೂರು	360	746	14	1120
9)	ಮೈಸೂರು	1123	1341	107	2571

1	2	3	4	5	6
10)	ಚಾಮರಾಜನಗರ	132	567	7	706
11)	ಮಂಡ್ಯ	419	1444	–	1863
12)	ಹಾಸನ	369	1006	27	1402
13)	ದಕ್ಷಿಣ ಕನ್ನಡ	1207	945	984	3136
14)	ಉಡುಪಿ	658	722	150	1530
15)	ಉತ್ತರ ಕನ್ನಡ	811	580	40	1431
16)	ಕೊಡಗು	137	539	–	676
17)	ಬೆಳಗಾವಿ	832	881	135	1848
18)	ಬಿಜಾಪುರ	179	428	15	622
19)	ಬಾಗಲಕೋಟೆ	397	577	–	974
20)	ಧಾರವಾಡ	810	787	153	1750
21)	ಹಾವೇರಿ	351	740	04	1095
22)	ಗದಗ್	214	468	–	682
23)	ಗುಲ್ಬರ್ಗ	281	409	8	698
24)	ಬೀದರ್	83	173	–	256
25)	ರಾಯಚೂರು	195	310	22	527
26)	ಕೊಪ್ಪಳ	95	193	02	290
27)	ಬಳ್ಳಾರಿ	342	330	24	696
	ಒಟ್ಟು	15732	20115	3122	38969

ದಿನಾಂಕ 7 1 2004 ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ಹುಲ್‌ಸೂರ್ ಕ್ಷೇತ್ರದ ಹುಲ್‌ಸೂರ ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ

16 (074) ಶ್ರೀ ರಾಜೇಂದ್ರ ವರ್ಮ (ಹುಲಸೂರ್) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಹುಲಸೂರು ವಿಧಾನ ಸಭಾ ಕ್ಷೇತ್ರದ ಹುಲಸೂರು ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ

ಆ) ಸರ್ಕಾರ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಕಾಲಮಿತ ನಿಗದಿ ಪಡಿಸಿದೆಯೇ

ಇ) ಯೋಜನೆಯನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಅಂದಾಜು ವೆಚ್ಚವೆಷ್ಟು?

ಶ್ರೀ ಕೆ ಬಿ ಕೋಳಿವಾಡ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಹೌದು ಬೀದರ್ ಜಿಲ್ಲೆಯ ಹುಲಸೂರ ವಿಧಾನ ಸಭಾ ಕ್ಷೇತ್ರದ ಹುಲಸೂರ ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಒದಗಿಸಲು ಈ ಗ್ರಾಮವನ್ನು ಜಲ ನಿರ್ಮಲ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗಿದೆ